# ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** 12ನೇ ಪಂಚವಾರ್ಷಿಕ ಯೋಜನೆಯಡಿ ಅಲ್ಪಸಂಖ್ಯಾತರಿಗಾಗಿ ಬಹುವಲಯವಾರು ಅಭಿವೃದ್ಧಿ ಯೋಜನೆಯಡಿ (ಎಂ.ಎಸ್.ಡಿ.ಪಿ) ವಲಯವಾರು ಗುಲ್ಬರ್ಗಾ ಜಿಲ್ಲೆಗೆ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 200 ಎಂಡಿಎಸ್ 2014, ಬೆಂಗಳೂರು ದಿನಾಂಕ: 15.04.2014
2) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 200 ಎಂಡಿಎಸ್ 2014, ಬೆಂಗಳೂರು ದಿನಾಂಕ: 30.04.2014.
3) Sanction Orders i) 3/10(1) 2012 PP, Dated: 28.02.2014 and ii) No: 3/10(6)/2013-PP-I, Dated: 28.02.2014 from the Government of India, Minstry of Minority Affairs, New Delhi.
4) Finance Department's two credit confirmation slip No. FD 25 BGL 2013, both dated: 25.04.2014
5) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 156 ಎಂಡಿಎಸ್ (ಎಂ.ಎಸ್.ಡಿ.ಪಿ) 2014, ಬೆಂಗಳೂರು ದಿನಾಂಕ: 24.05.2014.

>>>()<<<

**ಪ್ರಸ್ತಾವನೆ:-**

ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ 2013-14ನೇ ಸಾಲಿನಲ್ಲಿ ಚಾಲ್ತಿಯಿದ್ದ ಯೋಜನಾ ಕಾರ್ಯಕ್ರಮಗಳನ್ನು 2014-15ನೇ ಸಾಲಿನವರೆಗೆ ಮುಂದುವರೆಸಿ ಆದೇಶ ಹೊರಡಿಸಲಾಗಿದೆ. ಉಲ್ಲೇಖ(2)ರ ಸರ್ಕಾರಿ ಆದೇಶದಲ್ಲಿ 2014-15ನೇ ಸಾಲಿನಲ್ಲಿ ಬಹುವಲಯವಾರು ಅಭಿವೃದ್ಧಿ ಯೋಜನೆ ಲೆಕ್ಕಶೀರ್ಷಿಕೆ 2225-03-277-2-67 (059)ರಡಿ ರೂ. 11000.00 ಲಕ್ಷ ಒದಗಿಸಿರುವುದರಲ್ಲಿ ಮೊದಲನೇ ತ್ರೈಮಾಸಿಕ ಕಂತಾಗಿ ರೂ. 2750.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಉಲ್ಲೇಖ(3)ರನ್ವಯ ಕೇಂದ್ರ ಸರ್ಕಾರದ 12ನೇ ಪಂಚವಾರ್ಷಿಕ ಯೋಜನೆಯಡಿ ಅಲ್ಪಸಂಖ್ಯಾತರ ಮಂತ್ರಾಲಯ ವತಿಯಿಂದ ಜಾರಿಗೊಳಿಸಲಾಗುತ್ತಿರುವ ಅಲ್ಪಸಂಖ್ಯಾತರ ಬಹುವಲಯವಾರು ಅಭಿವೃದ್ಧಿ ಯೋಜನೆಯಡಿ ರಾಜ್ಯದ 7 ಜಿಲ್ಲೆಗಳು ಆಯ್ಕೆಯಾಗಿದ್ದು ಸದರಿ ಯೋಜನೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ಜಿಲ್ಲಾಧಿಕಾರಿಗಳಿಂದ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕೇಂದ್ರ ಸರ್ಕಾರದ ಅಲ್ಪಸಂಖ್ಯಾತರ ಮಂತ್ರಾಲಯದ 83ನೇ ಉನ್ನತ ಮಟ್ಟದ ಅಧಿಕಾರದತ್ತ ಸಮಿತಿಯಲ್ಲಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಶೇ 30% ರಷ್ಟು ಅನುದಾನ ರೂ. 118.72ಲಕ್ಷಗಳನ್ನು ಅಲ್ಪಸಂಖ್ಯಾತರ ಕೇಂದ್ರೀಕೃತ ಜಿಲ್ಲೆಯಾದ ಗುಲ್ಬರ್ಗಾ ಜಿಲ್ಲೆ ಚಿತ್ತಾಪುರ ಬ್ಲಾಕ್‌ಗೆ (ರೂ. ಒಂದು ಕೋಟಿ ಹದಿನೆಂಟು ಲಕ್ಷದ ಎಪ್ಪತ್ತೆರಡು ಸಾವಿರಗಳು ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆರವರಿಗೆ ಲಗತ್ತಿಸಿರುವ ಅನುಬಂಧದನ್ವಯ ಬಿಡುಗಡೆ ಮಾಡಲು ನಿರ್ಧರಿಸಿದ್ದು ಅದರಂತೆ ಈ ಆದೇಶ.

## ಆದೇಶ

**ಸಂಖ್ಯೆ:ಅಸಂನಿ/ಎಂ.ಎಸ್.ಡಿ.ಪಿ/ಸಿಆರ್-03/2014-15** **ದಿನಾಂಕ: 15.07.2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನಾಧರಿಸಿ ಉಲ್ಲೇಖ (5)ರ ಸರ್ಕಾರಿ ಆದೇಶದಲ್ಲಿ ಶೇ 30% ರಷ್ಟು ಅನುದಾನ ರೂ. 118.72 ಲಕ್ಷಗಳನ್ನು ಅಲ್ಪಸಂಖ್ಯಾತರ ಕೇಂದ್ರೀಕೃತ ಜಿಲ್ಲೆಯಾದ ಗುಲ್ಬರ್ಗಾ ಜಿಲ್ಲೆ ಚಿತ್ತಾಪುರ ಬ್ಲಾಕ್‌ಗೆ (ರೂ. ಒಂದು ಕೋಟಿ ಹದಿನೆಂಟು ಲಕ್ಷದ ಎಪ್ಪತ್ತೆರಡು ಸಾವಿರಗಳು ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ ರವರಿಗೆ ಅನುಬಂಧದಲ್ಲಿ ಲಗತ್ತಿಸಿರುವಂತೆ ಈ ಕೆಳಕಂಡ ನಿಬಂಧನೆಗೊಳಪಟ್ಟು ಚೆಕ್ ಸಂಖ್ಯೆ: 618836 ದಿನಾಂಕ: 15.07.2014ರ ಮೂಲಕ (ರೂ. ಒಂದು ಕೋಟಿ ಹದಿನೆಂಟು ಲಕ್ಷದ ಎಪ್ಪತ್ತೆರಡು ಸಾವಿರಗಳು ಮಾತ್ರ)ಗಳನ್ನು ನೀಡಲು ಆದೇಶಿಸಿದೆ.

**ನಿಬಂಧನೆಗಳು:-**

1. ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವು ಗುಲ್ಬರ್ಗಾ ಜಿಲ್ಲೆಯ ಅನುಬಂಧ-1ರಲ್ಲಿ ಲಗತ್ತಿಸಿರುವ ಕಾಮಗಾರಿಗೆ ಮಾತ್ರ ಸಂಬಂಧಿಸಿರುತ್ತದೆ.
2. ಸದರಿ ಕಾಮಗಾರಿಗಳ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ನಿಯಮಾನುಸಾರ ಮುಂದಿನ ಕ್ರಮವಹಿಸತಕ್ಕದ್ದು.